ದಿನಾಂಕಃ 30-01-2023

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ- 3 ರಿಂದ 6 ನೇ ಪ್ರತಿವಾದಿ ಪರ Sri K.U. ವಕೀಲರಿಂದಃ**

ದಾವಾ ಐಟಂ ನಂ.3 ರ ಹಳೇ ಮನೆಯ ಉತ್ತರದ ಮೂರನೇ ಒಂದು ಭಾಗ ಸಣ್ಣಪ್ಪನ ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನ ದಕ್ಷಿಣದ ಮೂರನೇ ಒಂದು ಭಾಗ 4 ರಿಂದ 6 ನೇ ಪ್ರತಿವಾದಿಯರ ತಂದೆ ಭೂತಯ್ಯನ ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನ ಮಧ್ಯದ ಮೂರನೇ ಒಂದು ಭಾಗ ನನ್ನ ತಂದೆಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ದಾವಾ ಐಟಂ ನಂ.3 ರಲ್ಲಿದ್ದ ಹಳೆಯ ಮನೆ ಸಂಪೂರ್ಣವಾಗಿ ಬಿದ್ದು ಹೋಗಿರುತ್ತದೆ ಎಂದರೆ ಸರಿ . ನನ್ನ ತಂದೆಯ ಹಿಸ್ಸೆಗೆ ಬಂದ ಸ್ವತ್ತು ಹಾಗೂ ಸಣ್ಣಪ್ಪ ಅಲಿಯಾಸ್ ಸಣ್ಣಪ್ಪಯ್ಯರವರ ಭಾಗಕ್ಕೆ ಬಂದಂತಹ ಸ್ವತ್ತು ಹಳೆಯ ಮನೆ ಬಿದ್ದು ಹೋದ ನಂತರ ನಿವೇಶನವಾಗಿ ಮಾರ್ಪಟ್ಟಿರುತ್ತದೆ ಎಂದರೆ ಸರಿ. 4 ರಿಂದ 6 ನೇ ಪ್ರತಿವಾದಿಯರು ದಾವಾ ಐಟಂ ನಂ.3 ರ ಮನೆ ಬಿದ್ದು ಹೋದ ನಂತರ ತಮಗೆ ಬಂದ ಮೂರನೇ ಒಂದು ಭಾಗದಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ .

ದಾವಾ ಐಟಂ ನಂ.01 ರ ಸ.ನಂ. 55/1 ರಲ್ಲಿ ನನ್ನ ತಂದೆಯ ಭಾಗಕ್ಕೆ ಬಂದ 38 ಗುಂಟೆ ಜಮೀನನ್ನು ನಿ.ಪಿ.1 ರ ನೋಂದಾಯಿತು ಕ್ರಯಪತ್ರದ ಮೂಲಕ 3 ರಿಂದ 6 ನೇ ಪ್ರತಿವಾದಿಯರ ತಂದೆಗೆ ನಮ್ಮ ತಂದೆ ಅವರ ಪರವಾಗಿ ಮತ್ತು ಮೈನರ್ ಆಗಿದ್ದ ನನ್ನ ಪರವಾಗಿ 1978 ರಲ್ಲಿ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ರ ಕ್ರಯಪತ್ರದಲ್ಲಿ ನಮೂದಾಗಿರುವ ಶಿರಾ ತಾಲ್ಲೂಕು ಕಳ್ಳಂಬೆಳ್ಳ ಹೋಬಳಿ ಕೆಂಚಗಾನಹಳ್ಳಿ ವಾಸಿ ಸುಮಾರು 35 ವರ್ಷದ ಭೂತಯ್ಯನ ಮೂರನೇ ಮಗ ಸಣ್ಣಭೂತಯ್ಯರವರು 4 ರಿಂದ 6 ನೇ ಪ್ರತಿವಾದಿಯರ ತಂದೆ ಎಂದರೆ ಸರಿ. ನಿ.ಪಿ.1 ರ ಕ್ರಯಪತ್ರದಲ್ಲಿ

ನಮೂದಾಗಿರುವ ಶಿರಾ ತಾಲ್ಲೂಕು ಕಳ್ಳಂಬೆಳ್ಳ ಹೋಬಳಿ ಕೆಂಚಗಾನಹಳ್ಳಿ, ವಾಸಿ ಸುಮಾರು 38 ವರ್ಷದ ಭೂತಯ್ಯನ 2 ನೇ ಮಗ ಲಕ್ಷ್ಮಯ್ಯ ಎನ್ನುವವರು ನನ್ನ ತಂದೆ ಎಂದರೆ ಸರಿ. ನಿ.ಪಿ.1 ರ ಕ್ರಯಪತ್ರದಲ್ಲಿ ನಮೂದಾಗಿರುವ ಲಕ್ಷ್ಮಯ್ಯನ ಮಗ 15 ವರ್ಷದ ಗುಂಡಯ್ಯ ಎನ್ನುವವರು ನಾನೇ ಆಗಿರುತ್ತೇನೆ. ನಿ.ಪಿ.1 ರ ಕ್ರಯಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿ.ಪಿ.1 ರ ಕ್ರಯಪತ್ರದಲ್ಲಿ ಹೇಳಲಾಗಿರುವ ಚಕ್ಕುಬಂದಿಯ ನಡುವೆ ಇರುವ 38 ಗುಂಟೆ ಜಮೀನು ನನ್ನ ತಂದೆಗೆ ಭಾಗದಲ್ಲಿ ಬಂದಂತಹ ಸ್ವತ್ತಾಗಿರುತ್ತದೆ ಎಂದರೆ ಸರಿ. ನಿ.ಪಿ.1 ರಲ್ಲಿ ನಮೂದಾಗಿರುವ ಉತ್ತರ ದಿಕ್ಕಿಗೆ ಇರುವ ಸಣ್ಣನರಸಿಂಹಯ್ಯರವರು ನನ್ನ ದೊಡ್ಡಪ್ಪ ಎಂದರೆ ಸರಿ. ನಿ.ಪಿ.1 ರಲ್ಲಿ ನಮೂದಾಗಿರುವ ದಕ್ಷಿಣ ದಿಕ್ಕಿಗೆ ಇರುವ ಸಣ್ಣಭೂತಯ್ಯುವರು 4 ರಿಂದ 6 ನೇ ಪ್ರತಿವಾದಿಯರ ತಂದೆ ಎಂದರೆ ಸರಿ.

ನಾನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿರುವ ಕಂದಾಯ ದಾಖಲಾತಿಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿ.ಪಿ.8 ರ ಪಹಣಿಯಲ್ಲಿ ಖಾತೆ ನಂಬರ್ 107/2 ಎಂದು ನಮೂದಾಗಿದೆ ಎಂದರೆ ಇರಬಹುದು, ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿ.ಪಿ.1 ರ ಕ್ರಯಪತ್ರದಲ್ಲಿ ಸ.ನಂ. 55/5 ರ ಬದಲು ಖಾತೆ ನಂಬರ್ 107/2 ಎಂದು ತಪ್ಪಾಗಿ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.1 ರ ಕ್ರಯಪತ್ರದಲ್ಲಿ ಹೇಳಲಾಗಿರುವ ಚಕ್ಕುಬಂದಿಯ ನಡುವೆ ಇರುವ ಜಮೀನಿನ ಸರ್ವೆ ನಂ. 55/5 ಆಗಿರುತ್ತದೆ ಎಂದರೆ ಸರಿ . ನನ್ನ ತಂದೆ ನಿ.ಪಿ.1 ರ ಕ್ರಯಪತ್ರದ ಮೂಲಕ38 ಗುಂಟೆಯನ್ನು 500-00 ರೂ.ಗಳಿಗೆ 4 ರಿಂದ 6 ನೇ ಪ್ರತಿವಾದಿಯರ ತಂದೆಗೆ ಮಾರಾಟ ಮಾಡಿ , ಸ್ವಾಧೀನವನ್ನೂ ಸಹ ತಾಃ 22-02-1978 ರಲ್ಲಿ ವಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಂದಿನಿಂದಲೂ ಸಹ 4 ರಿಂದ 6 ನೇ ಪ್ರತಿವಾದಿಯ ತಂದೆ 38 ಗುಂಟೆಯನ್ನು ಅನುಭವಿಸುತ್ತಿದ್ದು , ಆತನ ಮರಣದ ನಂತರ ಆತನ ವಾರಸುದಾರರು 3 ರಿಂದ 6 ನೇ ಪ್ರತಿವಾದಿಯರು ಸದರಿ ಸ್ವತ್ತನ್ನು ಅನುಭವಿಸುತ್ತಿದ್ದಾರೆ ಎಂದರೆ ಸಾಕ್ಷಿಯ ಎಲ್ಲರೂ ಸದರಿ ಸ್ವತ್ತಿನ ಅನುಭವದಲ್ಲಿರುತ್ತೇವೆಂದು ನುಡಿದಿರುತ್ತಾರೆ.

ಅದೇ ರೀತಿ ಸಣ್ಣಭೂತಯ್ಯನ ಹಿಸ್ಸೆಗೆ ಬಂದ ಸ್ವತ್ತನ್ನು ಆತ ಅನುಭವಿಸುತ್ತಿದ್ದು , ಆತನ ಮರಣದ ನಂತರ ಆತನ ವಾರಸುದಾರರು ಅನುಭವಿಸುತ್ತಿರುತ್ತಾರೆ ಎಂದರೆ ಸರಿ.

**ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ**
**ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.